

ನಾಯಿಗೂ ತಾರಾಪಟ್ಟ ತಂದುಕೊಟ್ಟ ಹೃದಯಂಗಮ ಕಥನದ '777 ಚಾರ್ಲಿ'



'ಬನಾರಸ್' ಸೋನಲ್ ಮೊಂತೆರೊ, ಜೈದ್ ಖಾನ್

ತೆರೆಕಂಡ ದಾಖಲಿಸಬೇಕಾದ ಸಿನಿಮಾಗಳು. ಶಿವರಾಜ್‌ಕುಮಾರ್, ಧನಂಜಯ, ಅಂಜಲಿ ತಾರಾಗಣದ 'ಬೈರಾಗಿ' ಸಿನಿಮಾ ತೆರೆಕಂಡಿದ್ದೂ ಜುಲೈನಲ್ಲಿಯೇ. ವಿಜಯ್ ಮಿಲ್ಟನ್ ನಿರ್ದೇಶನದ 'ಬೈರಾಗಿ' ಬಗ್ಗೆ ಪ್ರೇಕ್ಷಕರೂ ವಿರಾಗವನ್ನೇ ವ್ಯಕ್ತಪಡಿಸಿದರು.

ರವಿಚಂದ್ರನ್ ನಟನೆ–ನಿರ್ದೇಶನದ 'ರವಿ ಬೋಪಣ್ಣ', ಯೋಗರಾಜ ಭಟ್ ನಿರ್ದೇಶನದ 'ಗಾಳಿಪಟ 2' ಹಾಗೂ ಶಶಾಂಕ್ ನಿರ್ದೇಶನದ 'ಲವ್ 360' ಆಗಸ್ಟ್‌ನಲ್ಲಿ ತೆರೆಕಂಡ ಗಮನಾರ್ಹ ಸಿನಿಮಾಗಳು. ಬೋಪಣ್ಣನಾಗಿ ರವಿಚಂದ್ರನ್ ಮ್ಯಾಜಿಕ್ ಮಾಡಲಿಲ್ಲ. 2008ರಲ್ಲಿ ತೆರೆಕಂಡಿದ್ದ 'ಗಾಳಿಪಟ'ದ ರೋಮಾಂಚನ 2022ರ 'ಗಾಳಿಪಟ'ದಲ್ಲಿ ಇರಲಿಲ್ಲವಾದರೂ, ಸಿನಿಮಾ ಸಮಾಧಾನಕರ ಯಶಸ್ಸನ್ನು ಗಳಿಸಿತು. ಗಣೇಶ್, ದಿಗಂತ್ ಮತ್ತು ಪವನ್ ಕುಮಾರ್ ಮುಖ್ಯಪಾತ್ರಗಳಲ್ಲಿ ನಟಿಸಿದ್ದ 'ಗಾಳಿಪಟ 2', ನಿರ್ದೇಶಕರಾಗಿ ಯೋಗರಾಜ ಭಟ್ ಅವರಿಗೆ ಕೊಂಚ ನಿರಾಳಭಾವ ಉಂಟುಮಾಡಿದ ಸಿನಿಮಾ. ಶಶಾಂಕ್‌ರ ಹಳೆಯ ಸಿನಿಮಾಗಳ ಗೆಲುವಿನ ಪ್ರಭಾವಳಿ, ನವಿರು ಪ್ರೇಮಕಥೆಯ 'ಲವ್ 360' ಚಿತ್ರಕ್ಕೆ ನೆರವಾಗಲಿಲ್ಲ.

## 'ಕಾಂತಾರ'ದ ಜೈತ್ರಯಾತ್ರೆ

ಶರಣ್ ನಟನೆಯ, ಜಡೇಶ್ ಹಂಪಿ ನಿರ್ದೇಶನದ 'ಗುರುಶಿಷ್ಯರು' ಹಾಗೂ ರಿಷಬ್ ಶೆಟ್ಟಿ ನಟನೆ–ನಿರ್ದೇಶನದ 'ಕಾಂತಾರ' ಸೆಪ್ಟೆಂಬರ್ ತಿಂಗಳ ಹೊಳಪನ್ನು ಹೆಚ್ಚಿಸಿದ ಸಿನಿಮಾಗಳು. ಬೆಟ್ಟದಪುರ ಎನ್ನುವ ಊರನ್ನು ಉಳಿಸಿಕೊಳ್ಳುವ ನಿಟ್ಟಿನಲ್ಲಿ ನಡೆಯುವ ಖೋ ಖೋ ಆಟದ ಕಥನವನ್ನೊಳಗೊಂಡ 'ಗುರುಶಿಷ್ಯರು', ದೇಸಿ ಕ್ರೀಡೆಯ ರೋಮಾಂಚನವನ್ನು ದೃಶ್ಯಮಾಧ್ಯಮಕ್ಕೆ ಅಳವಡಿಸಿರುವ ಸಿನಿಮಾ. ಆಟದ ರೋಚಕತೆಯೊಂದಿಗೆ ಭಾವುಕತೆಯೂ ಮಿಳಿತಗೊಂಡ 'ಗುರುಶಿಷ್ಯರು' ಸಾಧಾರಣ ಯಶಸ್ಸನ್ನು ಗಳಿಸಿದ ಸಿನಿಮಾ. ಈ ಸಿನಿಮಾದ ಬೆನ್ನಿಗೆ, ಸೆ. 30ರಂದು ತೆರೆಕಂಡ 'ಕಾಂತಾರ' ಚಿತ್ರದ ಬಹುದೊಡ್ಡ ಯಶಸ್ಸಿನಿಂದಾಗಿ ಉಳಿದ ಚಿತ್ರಗಳು ಮಂಕಾದವು. ಕಾಡಿನಂಚಿನ ಜನರ ಬದುಕು ಹಾಗೂ ದೈವದ ಕುರಿತ ನಂಬಿಕೆಯನ್ನು ಕೇಂದ್ರವಾಗಿಟ್ಟುಕೊಂಡ 'ಕಾಂತಾರ' ಸಿನಿಮಾ ಗಮನಸೆಳೆದುದು ಅಚ್ಚುಕಟ್ಟಾದ ಬರವಣಿಗೆ ಹಾಗೂ ತಾಂತ್ರಿಕ ನಿರ್ವಹಣೆಯಿಂದಾಗಿ. ರಿಷಬ್ ಅವರ ಪರಿಣಾಮಕಾರಿ ನಟನೆಯೂ ಚಿತ್ರದ ಗೆಲುವಿಗೆ ಪೂರಕವಾಯಿತು. 'ಕಾಂತಾರ'ದ ಒಟ್ಟು ಗಳಿಕೆ 400 ಕೋಟಿ ರೂಪಾಯಿಗೂ ಹೆಚ್ಚು ಎಂದು ಹೇಳಲಾಗುತ್ತಿದೆ. 'ಒಂದು ದಂತಕಥೆ' ಎನ್ನುವುದು 'ಕಾಂತಾರ'ದ ಶೀರ್ಷಿಕೆಯೊಂದಿಗೆ ತಳಕು ಹಾಕಿಕೊಂಡಿರುವ ವಿಶೇಷಣ. ಈ ದಂತಕಥೆ ಸಿನಿಮಾದ ವಸ್ತುವಿಗೆ ಮಾತ್ರವಲ್ಲ, ಯಶಸ್ಸಿಗೂ ಅನ್ವಯಿಸುವ ವಿಶೇಷಣ.

'ಜೇಮ್ಸ್', 'ಕೆಜಿಎಫ್– ಚಾಪ್ಟರ್ 2' ಸಿನಿಮಾಗಳ ಗಳಿಕೆಯನ್ನು ಮೀರಿ ಕರ್ನಾಟಕದಲ್ಲಿ ಯಶಸ್ಸು ಕಂಡ 'ಕಾಂತಾರ', ನೆರೆಹೊರೆ ಭಾಷೆಗಳಿಗೆ ಡಬ್ ಆಗಿಯೂ ಗೆಲುವು ಕಂಡಿತು. 'ಕಾಂತಾರ'ದ ಯಶಸ್ಸು ಚಿತ್ರದ ನಾಯಕಿ ಸಪ್ತಮಿ ಗೌಡ ಅವರಿಗೆ ಮತ್ತಷ್ಟು ಅವಕಾಶಗಳನ್ನು ತಂದುಕೊಟ್ಟರೆ, ನಾಯಕ–ನಿರ್ದೇಶಕನಾಗಿ ರಿಷಬ್‌ರ ಬೇಡಿಕೆಯನ್ನು ಮತ್ತಷ್ಟು ಹೆಚ್ಚಿಸಿದೆ.

'ಕಾಂತಾರ'ದಂತೆಯೇ ಪ್ರಾದೇಶಿಕತೆಯನ್ನು ನೆಚ್ಚಿಕೊಂಡು ಚಿತ್ರರಸಿಕರ ಮೆಚ್ಚುಗೆ ಗಳಿಸಿದ 'ಡೊಳ್ಳು' ಸಿನಿಮಾವನ್ನು ಇಲ್ಲಿ ನೆನಪಿಸಿಕೊಳ್ಳಬೇಕು. 2020ನೇ ಸಾಲಿನ 'ಅತ್ಯುತ್ತಮ ಪ್ರಾದೇಶಿಕ ಕನ್ನಡ ಚಿತ್ರ' ವಿಭಾಗದಲ್ಲಿ ರಾಷ್ಟ್ರಪ್ರಶಸ್ತಿ ಗಳಿಸಿದ ಈ ಚಿತ್ರದ ನಿರ್ದೇಶನ ಸಾಗರ್ ಪುರಾಣಿಕ್ ಅವರದ್ದು. ಜನಪ್ರಿಯ ನಿರ್ದೇಶಕ ಪವನ್ ಒಡೆಯರ್ 'ಡೊಳ್ಳು' ಸಿನಿಮಾದ ನಿರ್ಮಾಪಕರು. ಕಾರ್ತಿಕ್